ಶ್ರೀ ಸಿ.ಟಿ. ರವಿ:– ಇದರಿಂದ ಲಂಚಕ್ಕೆ ದಾರಿಯಾಗುತ್ತಿದೆ. ನೀವು ಈಗ ಯಾರು ಹೆಚ್ಚು ವ್ಯಾಪಾರ ಮಾಡುತ್ತಾರೆ ಎಂದು certify ಮಾಡುವುದಕ್ಕೆ ಆಗುವುದಿಲ್ಲ. ಯಾರು ಎಷ್ಟು ವ್ಯಾಪಾರ ಮಾಡುತ್ತಾರೆ ಎಂದು ನಿಮ್ಮ ಹತ್ತಿರ ದಾಖಲೆ ಇರುವುದಿಲ್ಲ.

ಅಧ್ಯಕ್ಷರು:– ಚರ್ಚೆ ಇಲ್ಲ.

ಶ್ರೀ ಸಿ.ಟಿ. ರವಿ:– ಅದರಿಂದ ಲಂಚಕ್ಕೆ ದಾರಿಯಾಗುತ್ತಿದೆ. ಏಕ್‌ದಮ್ 300 ಪಟ್ಟು ಜಾಸ್ತಿ ಮಾಡಿರುವುದು ಸರಿಯಲ್ಲ.

ಅಧ್ಯಕ್ಷರು:– ಶ್ರೀ ಗೋವಿಂದ ಕಾರಜೋಳರವರು ಮಾತನಾಡುವುದು.

6. ವಿಷಯ: ಮುಧೋಳ ತಾಲ್ಲೂಕಿನಲ್ಲಿ ಹೊಸದಾಗಿ Traffic Police Station ಸ್ಥಾಪಿಸುವ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):– ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದ ಮುಧೋಳ ತಾಲ್ಲೂಕಿನಲ್ಲಿ ಕಳೆದ ಐದು ವರ್ಷಗಳಲ್ಲಿ ಒಂದು ಸಾವಿರಕ್ಕಿಂತಲೂ ಹೆಚ್ಚು ಅಪಘಾತಗಳಾಗಿ, 400 ಕ್ಕಿಂತಲೂ ಹೆಚ್ಚು ಜನ ನಿಧನ ಹೊಂದಿದ್ದಾರೆ. ಸಾವಿರಾರು ಜನ ಅಂಗವಿಕಲರಾಗಿದ್ದಾರೆ, ಅಲ್ಲಿ Traffic ಜಾಸ್ತಿಯಾಗಿದೆ. 7 ಸಕ್ಕರೆ ಕಾರ್ಖಾನೆಗಳು, 4 ಸಿಮೆಂಟ್ ಕಾರ್ಖಾನೆಗಳು ಮತ್ತು ಸುಣ್ಣದ ಕಲ್ಲು ಸಾಗಾಣಿಕೆ ಮಾಡುವಂತಹ ಲಾರಿಗಳ ಓಡಾಟದಿಂದ ಪ್ರತಿನಿತ್ಯ ವಾಹನ ಸಂಚಾರಕ್ಕೂ ತೊಂದರೆಯಾಗಿದೆ ಮತ್ತು ಅಪಘಾತಗಳ ಸಂಖ್ಯೆ ಹೆಚ್ಚಾಗಿದೆ. ಅದನ್ನು ನಿಯಂತ್ರಣ ಮಾಡಲು ಅಲ್ಲಿ ಒಂದು Traffic Police Stationನ ಅವಶ್ಯಕತೆ ಇದ್ದು, ಅದನ್ನು ಸರ್ಕಾರ ಮಂಜೂರು ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಹಾಗೂ ಸಕ್ಕರೆ ಸಚಿವರು):– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸೋಮವಾರದಂದು ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು:– ಆಯಿತು. ಮಾನ್ಯ ಶಿವಲಿಂಗೇಗೌಡರು ಮಾತನಾಡುವುದು.